ದಿನಾಂಕಃ**25.09.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಯು ಎಸ್ ವಕೀಲರಿಂದಃ-

ತರೀಕೆರೆ ನ್ಯಾಯಾಲಯದ ಅಸಲು ದಾವಾ ಸಂ.30/1980 ರ ತೀರ್ಪಿನ ಆಧಾರದ ಮೇಲೆ ಸಲ್ಲಿಸಿದ ಎಫ್‌ಡಿಪಿಯ ಅಂತಿಮ ಆದೇಶವು 2000 ನೇ ಇಸವಿಯಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು 1999 ರಲ್ಲಿಯೇ ಆಗಿರುತ್ತದೆ ಎಂದು ನುಡಿಯುತ್ತಾರೆ. 1999 ರ ಅಂತಿಮ ಆದೇಶದ ನಂತರ ನಮ್ಮ ಕುಟುಂಬದವರು ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ನಂತರವೂ ಸಹಃ ನಾವು ಒಟ್ಟು ಕುಟುಂಬದಲ್ಲಿ ಇದ್ದೆವು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ನಿ ಡಿ 2 ರ ಪ್ರಕಾರ ಅಸೆಸ್ ಮೆಂಟ್ ಸಂ.549/ಪಿ1 ರ ಪೂರ್ವ ದಿಕ್ಕಿಗೆ ದಾರಿ ಮತ್ತು ಪುಟ್ಟಪ್ಪ ರವರ ಜಾಗ ಇದೆ, ಅದರ ಪಶ್ಚಿಮಕ್ಕೆ ಸರ್ವೆ ನಂ.128/9 ರ ನಮ್ಮ ಹಿಡುವಳಿ ಜಮೀನು ಇದೆ. ಸದರಿ ಸರ್ವೆ ನಂ.128/9 ರ ಜಮೀನನ್ನು ನಾವು ಅಣ್ಣ-ತಮ್ಮಂದಿರು ಹಂಚಿಕೆ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಮ್ಮ ಹಿಡುವಳಿ ಜಮೀನಿನ ಪೂರ್ವಕ್ಕೆ ಗ್ರಾಮ ಠಾಣಾ ಜಾಗ ಇದೆ. ಸದರಿ ಗ್ರಾಮ ಠಾಣಾ ಜಾಗವನ್ನು ನಾವು ಅಸೆಸ್ ಮೆಂಟ್ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಮೊದಲಿಗೆ ಪ್ರತಿವಾದಿಗಳು ಮಾಡಿಸಿಕೊಂಡಿರುತ್ತಾರೆ ನಂತರ ನಾನು ಮಾಡಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಅಸೆಸ್ ಮೆಂಟ್ ಸಂ.549 ರ ಜಾಗದಲ್ಲಿ ಯಾವುದೇ ಜಾಗವನ್ನು ಸರ್ಕಾರವು ಹೆದ್ದಾರಿಗೆ ಅತಿಕ್ರಮಿಸಿಕೊಂಡಿರುವುದಿಲ್ಲ.

ಈಗ ನೋಡುತ್ತಿರುವ 3 ಪೋಟೋಗಳಲ್ಲಿ ಕಾಣುತ್ತಿರುವ ಶೆಡ್ ಸೋಮಶೇಖರಪ್ಪ(D2)ರವರಿಗೆ ಸೇರಿದ ಆಸ್ತಿ ಎಂದರೆ ಸಾಕ್ಷಿಯು ನಾವು ಒಟ್ಟು ಕುಟುಂಬದಲ್ಲಿ ಇದ್ದಾಗ ಸದರಿ ಶೆಡ್ ಮಾಡಿರುತ್ತೇವೆ, ಈಗ ಅವರು ಅವರ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈಗ ನೋಡುತ್ತಿರುವ 3 ಪೋಟೋದಲ್ಲಿ ಕಾಣುತ್ತಿರುವ ಶೆಡ್‌ನ ಸ್ವಾಧೀನದಲ್ಲಿ 2 ನೇ ಪ್ರತಿವಾದಿಯು ಇದ್ದಾರೆ.

ಸಾಕ್ಷಿಯು ಸದರಿ ಫೋಟೋಗಳನ್ನು ಗುರುತಿಸಿದ ಮೇರೆಗೆ ಅವುಗಳನ್ನು ನಿಡಿ **8** ರಿಂದ **10** ಎಂದು ಗುರುತಿಸಲಾಯಿತು. ಸದರಿ ಶೆಡ್ಡಿನ ಹಿಂಭಾಗದ ಜಮೀನಿನ ಖಾತೆ ನನ್ನ, ನನ್ನ ಪತ್ನಿಯ ಹೆಸರಿನಲ್ಲಿ ಮತ್ತು ನನ್ನ ಅಣ್ಣನ ಹೆಸರಿನಲ್ಲಿ ಇದೆ. ಗ್ರಾಮ ಠಾಣಾ ಜಾಗದಲ್ಲಿ ನಮ್ಮನ್ನು ಹೊರತುಪಡಿಸಿ ಬೇರೆ ಯಾರಿಗೂ ಜಾಗ ಮಂಜೂರು ಮಾಡಿರುವುದಿಲ್ಲ.

ನಮ್ಮ ಹಿಡುವಳಿ ಜಮೀನಿನ ಪಕ್ಕದಲ್ಲಿ ಸ್ವಾಧೀನದಲ್ಲಿ ಇದ್ದವರು ಅವರವರ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ತಿಳಿಸದೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ನಾವು ಖಾತೆ ಮಾಡಿಸುವಾಗ ಅವರುಗಳಿಗೆ ತಿಳಿಸಿರುವುದಿಲ್ಲ. 2018 ರಲ್ಲಿ ಪ್ರತಿವಾದಿಗಳ ಹೆಸರಿಗೆ ಖಾತೆಯಾಗಿರುತ್ತದೆ. ಈ ಬಾಬ್ತು ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಹೆದ್ದಾರಿಗೆ ಜಮೀನು ಅತಿಕ್ರಮವಾದ ನಂತರ 2 ನೇ ಪ್ರತಿವಾದಿಗೆ ಪರಿಹಾರ ಮೊತ್ತವಾಗಿ ಸುಮಾರು ರೂ.11,22,200/- ಚಿಲ್ಲರೆ ಹಣ ಬಂದಿರುತ್ತದೆ. ನ್ಯಾಯಾಲಯದಲ್ಲಿ ವಿಭಾಗವಾಗಿ ಅಂತಿಮ ಆದೇಶವಾದ ನಂತರ 2006 ನೇ ಇಸವಿಯಲ್ಲಿ ನಾವು ನಮ್ಮ ನಮ್ಮ ಪಾಲಿಗೆ ಬಂದ ಆಸ್ತಿಯ ಖಾತೆ ಮಾಡಿಸಿಕೊಂಡು ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿ. ಅದೇ ರೀತಿ ಆ ದಿನದಿಂದಲೂ ಗ್ರಾಮಠಾಣಾ ಜಾಗವನ್ನು ಸಹ ಅವರವರ ಹೆಸರಿಗೆ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿಯಲ್ಲ ನಾವು ಸ್ವಾಧೀನದಲ್ಲಿ ಇದ್ದೆವು. ನಾವು ಗ್ರಾಮ ಠಾಣಾ ಜಾಗದಲ್ಲಿ ಒಟ್ಟು ಕುಟುಂಬದ ಸದಸ್ಯರಾಗಿ ಸ್ವಾಧೀನದಲ್ಲಿ ಇದ್ದೇವೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಈ ದಾವೆಯನ್ನು ದಾವಾ ಆಸ್ತಿಯ ಬಾಬ್ತು ಬಂದ ಪರಿಹಾರದ ಮೊತ್ತವನ್ನು 3 ಜನಕ್ಕು ಸಮವಾಗಿ ಬರಬೇಕು ಎಂದು ಹಾಕಿರುತ್ತೇನೆ. ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1999 ರಲ್ಲಿ ಅಂತಿಮ ಆದೇಶವಾದ ನಂತರ ನಾವು ಒಟ್ಟು ಕುಟುಂಬದ ಸದಸ್ಯರಾಗಿ ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಪಂಚಾಯಿತಿಗೆ ಅರ್ಜಿ ನೀಡಿ ಅವರ ಹೆಸರಿಗೆ ಸರ್ವೆ ನಂ.128/7 ಕ್ಕೆ ಪಕ್ಕದಲ್ಲಿ ಇದ್ದ ಗ್ರಾಮ ಠಾಣಾ ಜಾಗವನ್ನು ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಪತ್ನಿಯ ಹೆಸರಿನಲ್ಲಿ ತಲಾ ಪೂರ್ವ ಪಶ್ಚಿಮ 70 ಅಡಿ x ಉತ್ತರ ದಕ್ಷಿಣ 20 ಅಡಿ ಜಾಗ ಮಂಜೂರಾಗಿದೆ. ನನ್ನ

ಸಹೋದರ ಬಸವರಾಜುವಿಗೆ ಮಂಜೂರಾದ ಜಾಗದ ವಿಸ್ತೀರ್ಣ ನನಗೆ ಗೊತ್ತಿಲ್ಲ. ಅವರಿಗೂ ಸಹಃ ಗ್ರಾಮ ಠಾಣಾದ ಜಮೀನಿನಲ್ಲಿ ಜಾಗ ಮಂಜೂರಾಗಿದೆ ಎಂದರೆ ಸರಿ.

ಈ ದಾವೆಯಲ್ಲಿ ನನ್ನ ಮತ್ತು ನನ್ನ ಅಣ್ಣ ಬಸವರಾಜು ರವರ ಹೆಸರಿನಲ್ಲಿರುವ ಜಮೀನನ್ನು ಸೇರಿಸಿಲ್ಲ ಎಂದರೆ ಸರಿ. ಸರ್ವೆ ನಂ.128/4 ರ ಸಂಬಂಧ 2 ನೇ ಪ್ರತಿವಾದಿಯು ಅಸಲು ದಾವೆ ಸಂ.557/2018 ರಂತೆ ದಾವೆ ಹೂಡಿರುವ ವಿಚಾರ ನನಗೆ ಗೊತ್ತು. ಸದರಿ ದಾವೆಯನ್ನು ಕುಪ್ಪಾಳು ಗ್ರಾಮದ ಸರ್ವೆ ನಂ.128/4 ರ ಜಮೀನಿಗೆ ಸಂಬಂಧಪಟ್ಟಂತೆ ಹಾಕಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಒಟ್ಟು 6 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತೇನೆ ಎಂದು ಹಾಕಿರುತ್ತಾರೆ ಎಂದರೆ ಹಾಕಿರುವುದು ನಿಜ ಆದರೆ ನಾನು ಒತ್ತುವರಿ ಮಾಡಿಲ್ಲ. ಸದರಿ ದಾವೆಯಲ್ಲಿ ಸರ್ವೆಯರ್ ರವರು ಸರ್ವೆ ಮಾಡಿ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಸರ್ವೆ ವರದಿಯಲ್ಲಿಯೂ ಸಹ ನಾನು 6 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತೇನೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅಸಲು ದಾವೆ ಸಂ.557/2018 ರ ದಾವೆ ಹೂಡಿದ ನಂತರ ಈ ದಾವೆಯನ್ನು ನಾನು ಸಲ್ಲಿಸಿರುತ್ತೇನೆ ಎಂದರೆ ಆ ದಾವೆಗೂ ಈ ದಾವೆಗೂ ಸಂಬಂಧವಿಲ್ಲ.

ಈ ದಾವೆಯಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. 2013 ರಿಂದಲು ದಾವಾ ಸ್ವತ್ತಿನ ಖಾತೆಯು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2006-07 ರಲ್ಲಿ 2 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇತ್ತು ಆ ನಂತರ 2011 ರಲ್ಲಿ 2 ನೇ ಪ್ರತಿವಾದಿ ಮತ್ತು ಆತನ ಹೆಂಡತಿಯ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದು ನುಡಿಯುತ್ತಾರೆ. 2006 ರಲ್ಲಿ 2 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಆಗಿದ್ದ ವಿಚಾರ ನನಗೆ ಗೊತ್ತಿತ್ತು. 2006 ರಿಂದ ಈ ದಾವೆ ಹಾಕುವವರೆಗೂ ಖಾತೆ ಮಾಡಿರುವುದು ಸರಿ ಇಲ್ಲ ಎಂದು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಗೆ ಪರಿಹಾರದ ಹಣ ಬಂದ ನಂತರ ನನಗೆ ಹೊಟ್ಟೆಹುರಿಯಿಂ ದ ಈ ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ರೀತಿಯ ಹಕ್ಕು, ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಸತ್ಯವನ್ನು ಮರೆಮಾಚಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸೂಕ್ತವಾದ ನ್ಯಾಯಾಲಯದ ಶುಲ್ಕ

ಪಾವತಿಸಿರುವುದಿಲ್ಲ ಎಂದರೆ ನಾವು ಹಣ ಪಾವತಿ ಮಾಡಿ ದಾವೆ ಸಲ್ಲಿಸಿರುತ್ತೇವೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.